ಓ.ಎಸ್. ನಂ. 49/2021
ಪಿ.ಡಬ್ಲ್ಯೂ- 1

(ಇಂದು ದಿಃ 27-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:- ಶ್ರೀ.TVP** ವಕೀಲರಿಂದ **:-**

ನಾನು MA ಪದವಿಧರೆ. ಮನೆಯಲ್ಲಿರುತ್ತೇನೆ. ನನ್ನ ತಾತನ ಹೆಸರು ಸಾಯಿಬಣ್ಣ ರೆಡ್ಡಿ. ನನ್ನ ಅಜ್ಜಿ ಹೆಸರು ರಾವಮ್ಮ. ಸಾಯಿಬಣ್ಣರೆಡ್ಡಿಗೆ 5 ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. ಅವರುಗಳೆಂದರೆ ವಿರಭದ್ರಪ್ಪ, ಈರಮ್ಮ, ಬಸವರಾಜ, ಮಲ್ಲಮ್ಮ, ಮಲ್ಲಿಕಾರ್ಜುನ, ಸಿಧ್ರಾಮಪ್ಪ ಮತ್ತು ಶಾಮರಾವ ಎಂದರೆ ಸರಿ. ಸಿಧ್ರಾಮಪ್ಪ ನನ್ನ ತಂದೆ ಎಂದರೆ ಸರಿ. ಈರಮ್ಮ ಮತ್ತು ಮಲ್ಲಮ ನನ್ನ ಅತ್ತೆಯರು ಎಂದರೆಸರಿ. ಅವರನ್ನು ಈ ದಾವೆಯಲ್ಲಿ ಪಾಟಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆ ಬದುಕಿದ್ದಾರೆ. ನನ್ನ ತಂದೆ ಸರ್ಕಾರಿ ಬಸ್ ಚಾಲಕರಾಗಿದ್ದರು. 20 ವರ್ಷಗಳ ಹಿಂದೆ ಸ್ವಯಂನಿವೃತ್ತಿ ಪಡೆದುಕೊಂಡು ಮನೆಯಲ್ಲಿದ್ದಾರೆ. ನನ್ನ ತಂದೆಗೆ ಆರೋಗ್ಯ ಸರಿಯಿಲ್ಲ. ಅವರಿಗೆ ಮುರ್ಚೆ ರೋಗ ಇದೆ. ನನ್ನ ತಂದೆಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ. ಮಾತನಾಡಲು ಬರುತ್ತದೆ. ನಡೆದಾಡಲು ಬರುತ್ತದೆ. ನನ್ನ ತಂದೆಗೆ ಪಿಟ್ಸ ಇದೆ ಕಾರಣ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ನನ್ನ ತಂದಗೆ ಪಿಟ್ಸ ಕಾಯಿಲೆ ಇದೆ ಮತ್ತು ಕಣ್ಣು ಕಾಣುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾತನಿಗೆ 18 ಎಕರೆ ಜಮೀನು ಇತ್ತು. ಸರ್ವೆ ನಂ. 69 ರಲ್ಲಿನ 11 ಎಕರೆ 15 ಗುಂಟೆಗೆ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ಸರ್ವೆ ನಂ. 58/2:- 7 ಎಕರೆ 5 ಗುಂಟೆ, ಸರ್ವೆ ನಂ. 20:- 2 ಎಕರೆ 20 ಗುಂಟೆ ಮತ್ತು ಸರ್ವೆ ನಂ. 166:- 18 ಗುಂಟೆ ಮತ್ತು 2 ಮನೆಗಳು ನಂ. 6-64, 7-37 ಈ ಸ್ವತ್ತುಗಳು ಕೂಡ ನನ್ನ ತಾತನ ಸ್ವತ್ತುಗಳು ಎಂದರೆ ಸರಿ. ಈ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ನನ್ನ ತಂದೆ ಮತ್ತು ನನ್ನ ತಾತ 1981 ರಲ್ಲಿ ವಾಟ್ನಿ ಪತ್ರ ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಇಂಗ್ಲಿಷ ಭಾಷೆಯಲ್ಲಿ ಸಹಿ ಮಾಡುತ್ತಾರೆ. ನನ್ನ ತಾತ ಮತ್ತು ದೊಡಪ್ಪಂದಿರ ಸಹಿಗಳನ್ನು ನೋಡಿ ಗುರುತಿಸಲು ಆಗುವುದಿಲ್ಲ. ನನ್ನ ತಂದೆ ಆತನ ಅಣ್ಣ-ತಮ್ಮಂದಿರ ಮತ್ತು ತಂದೆಯ ಸಹಿ ಗುರುತಿಸಬಲ್ಲರು ಎಂದರೆ ಸರಿ. ನನ್ನ ತಂದೆ, ಆತನ ಸಹೋದರರು ಮತ್ತು ನನ್ನ

ತಾತ ದಿಃ 05-04-1981 ರಂದು ವಾಟ್ನಿಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಸದರಿ ವಾಟ್ನಿ ಪತ್ರದ ಪ್ರಕಾರ ಅವರವರ ಭಾಗಕ್ಕೆ ಬಂದ ಸ್ವತ್ತುಗಳಿಗೆ ಅವರವರ ಹೆಸರಿಗೆ ಮುಟೇಷನ ಆಗಿದೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನನ್ನ ದೊಡ್ಡಪ್ಪ ವಿರಭದ್ರಪ್ಪ ರವರಿಗೆ ಸರ್ವೆ ನಂ. 69 ರಲ್ಲಿ 3 ಎಕರೆ 26 ಗುಂಟೆ ಮತ್ತು ಮನೆ ನಂ. 6-64, ಬಸವರಾಜ ರವರಿಗೆ ಸರ್ವೆ ನಂ. 69 ರಲ್ಲಿ 3 ಎಕರೆ 26 ಗುಂಟೆ ಮತ್ತು ಮನೆ ನಂ. 7-37, ಮಲ್ಲಿಕಾರ್ಜುನ ರವರಿಗೆ ಸರ್ವೆ ನಂ. 69 ರಲ್ಲಿ 3 ಎಕರೆ 28 ಗುಂಟೆ ಮತ್ತು ಮನೆ ನಂ. 7-37, ನನ್ನ ತಂದೆಗೆ ಸರ್ವೆ ನಂ. 58/2 ರಲ್ಲಿ 3 ಎಕರೆ 22 ಗುಂಟೆ ಮತ್ತು ಮನೆ ನಂ. 7-37, ಶರಣಪ್ಪನಿಗೆ ಸರ್ವೆ ನಂ. 58/2 ರಲ್ಲಿ 3 ಎಕರೆ 23 ಗುಂಟೆ ಮತ್ತು ಮನೆ ನಂ. 7-37 ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಸರ್ವೆ ನಂ. 20 ಮತ್ತು 166 ಮಲ್ಲಿಕಾರ್ಜುನ ಮತ್ತು ಶಾಮರಾವ ರವರ ಮದುವೆಯಾದ ನಂತರ ಭಾಗ ಆಗಬೇಕೆಂದು ನಿರ್ಧಾರ ಆಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆಗೆ ಬಂದಿದ್ದ 3 ಎಕರೆ 22 ಗುಂಟೆ ಜಮೀನಿನ ಪೈಕಿ 1 ಎಕರೆಯನ್ನು 3 ನೇ ಪ್ರತಿವಾದಿಗೆ ಕೊಟ್ಟರು ಎಂದರೆ ಸರಿಯಲ್ಲ. ಈಗ ನನ್ನ ತಂದೆ ಹೆಸರಿಗೆ 2 ಎಕರೆ 22 ಗುಂಟೆ ಬರುತ್ತಿದೆ ಎಂದರೆ ನನಗೆ ಹೇಳಿಲ್ಲ ಎಂದು ಹೇಳುತ್ತಾರೆ. ಶಾಮರಾವ ತನ್ನ ಹೆಸರಿನಲ್ಲಿದ್ದ ಜಮೀನನ್ನು ತನ್ನ ಹೆಂಡತಿ ಹೆಸರಿಗೆ ಮುಟೇಷನ ಮಾಡಿಸಿಕೊಂಡು ಪೂರ್ತಿ ಜಮೀನನ್ನು ಕಿರಣಕುಮಾರ ಮತ್ತು ನಾಗೇಶರವರಿಗೆ ಮಾರಾಟ ಮಾಡಿದದಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ. 58 ರಲ್ಲಿನ ಜಮೀನು ನನ್ನ ತಂದೆ ಹೆಸರಿಗೆ 3 ಎಕರೆ 22 ಗುಂಟೆ ಮತ್ತು ಶಾಮರಾವನ ಹೆಸರಿಗೆ 3 ಎಕರೆ 22 ಗುಂಟೆ ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ. ಪಾಲು ವಾಟ್ನಿ ಪ್ರಕಾರ ಮುಟೇಷನ ಆಗಿ ನನ್ನ ತಂದೆ ಹೆಸರಿಗೆ ದಾಖಲಾಗಿ ಅಲ್ಲಿಂದ ಇಲ್ಲಿಯವರೆಗೆ ನನ್ನ ತಂದೆ ಹೆಸರಿಗೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಶರಣಪ್ಪನ ಹೆಸರಿನಲ್ಲಿ 3 ಎಕರೆ 23 ಗುಂಟೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಮುಂಚೆ ಸರ್ವೆ ನಂ. 20 ನನ್ನ ತಾತನ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಂತರ ನನ್ನ ಅಜ್ಜಿ ಹೆಸರಿಗೆ ಬಂತು ಎಂದರೆ ಸರಿ. ಈಗ ನನ್ನ ತಂದೆ ಮತ್ತು ಆತನ ಸಹೋದರರು ಜಂಟಿ ಮುಟೇಷನ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಆರೀತಿ ಎಲ್ಲರು ಜಂಟಿಯಾಗಿ ಮುಟೇಷನ ಮಾಡಿಸಿಕೊಂಡ ನಂತರ ಸದರಿ ಸ್ವತ್ತನ್ನು ಬೇರೆಯವರಿಗೆ ಮಾರಾಟ

ಮಾಡಿದ್ದರು ಎಂದರೆ ಸರಿ.

ನಾನು ಜನಿಸುವ ಮುಂಚೆ ನನ್ನ ತಂದೆ ಮತ್ತು ಆತನ ಸಹೋದರರು ವಾಟ್ನಿ ಮಾಡಿಕೊಂಡಿದ್ದು ಅದರಂತೆ ಮುಟೇಷನ ಆಗಿದೆ ಎಂದರೆ ಸರಿಯಲ್ಲ. ನನ್ನ ತಾತನ ಸ್ವತ್ತುಗಳಲ್ಲಿ ನನ್ನ ತಂದೆಗೆ ವಾಟ್ನಿಯಲ್ಲಿ ಭಾಗ ಬಂದಿದ್ದು ಅದರಂತೆ ಮುಟೇಷನ ಆಗಿದ್ದು ಅದರಂತೆ ಕಬ್ಜಾ ಇದ್ದರು ಕೂಡ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಾಗಿದ್ದರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಸಕಾರಣ ಇಲ್ಲದೆ ನಾನು SPA ಪಡೆದುಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ದೊಡ್ಡಪ್ಪಂದಿರು ಮುಟೇಷನ ಮಾಡಿಕೊಂಡ ಸಂಗತಿ 4-5 ವರ್ಷಗಳ ಹಿಂದೆ ಗೊತ್ತಾಗಿದೆ. ಸದರಿ ಮುಟೇಷನ ಪ್ರಶ್ನೇ ಮಾಡಿ ಅಪೀಲ ಸಲ್ಲಿಸಿಲ್ಲ. ದಾವಾ ಸರ್ವೆ ನಂ. 69 ಪ್ರತಿವಾದಿಯರ ಭಾಗಕ್ಕೆ ಬಂದಿದ್ದು ಅದು ಗುಲಬರ್ಗಾ ಸೇಡಂ ರಸ್ತೆಗೆ ತಾಗಿಕೊಂಡು ಇರುವ ಕಾರಣ ಈಗ ಅದರ ಬೆಲೆ ಹೆಚ್ಚಾಗಿದ್ದು ಅದು ಭೂಪರಿವರ್ತನೆಗೆ ಯೋಗ್ಯವಾದ ಜಮೀನಾಗಿದ್ದು ಕಾರಣ ಹೇಗಾದರು ಮಾಡಿ ಅದರಲ್ಲಿ ಭಾಗ ಪಡೆಯಬೇಕೆಂಬ ದುರುದ್ದೇಶದಿಂದ ನನ್ನ ತಂದೆ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಜಮೀನುಗಳಿಗೆ ಸಂಬಂಧ ಪಡದ ಕಾರಣ ನಾನು ಹಾಜರುಪಡಿಸಿರುವ ಪಂಚಾಯತಿ ದಾಖಲಾತಿಗಳು ಈ ದಾವೆಗೆ ಸುಸಂಬಂಧ ಅಲ್ಲಾ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.